ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸಿಂದಗಿ

ಕ್ರಿಮಿನಲ್ ಕೇಸ್ ನಂ.7018/2022

ಸಿ.ಡಬ್ಲೂ:1 ಪಿ.ಡಬ್ಲೂ:1

ಸಾಕ್ಷಿಗೆ ದಿನಾಂಕ :18/08/2023 ರಂದು ಪ್ರಮಾಣಿಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಲಕ್ಷ್ಮಣ |
| ತಂ/ಗಂ. ಹೆಸರು | ಮಲ್ಲಪ್ಪ ಸಾಸಾಬಾಳ |
| ವಯಸ್ಸು | 42 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ನಿವಾಳಖೇಡ |

ಮುಖ್ಯ ವಿಚಾರಣೆ : ಶ್ರೀ ಎಪಿಪಿ ಯವರಿಂದ

ಸುಮಾರು 1 ವರ್ಷದ ಒಳಗೆ ನಾನು ದೇವರ ಹಿಪ್ಪರಗಿಯಲ್ಲಿದ್ದಾಗ ಚಾ ಸಾ 2 ರವರು ನನಗೆ ಫೋನ್ ಮಾಡಿ ತಿಳಿಸಿದ್ದೇನೆಂದರೆ ದೇವರ ಹಿಪ್ಪರಗಿ ಬಸ್ ನಿಲ್ದಾಣ ಹತ್ತಿರ ನನ್ನ ಸಹೋದರ ಚಾಸಾ 4 ರವರಿಗೆ ಅಪಘಾತವಾಗಿದೆ ಬೇಗ ಬಾ ಎಂದು ಹೇಳಿದ. ನಂತರ ನಾನು ಬಸ್ ನಿಲ್ದಾಣ ಹತ್ತಿರ ಹೋಗಿರುತ್ತೇನೆ. ಅಲ್ಲಿ ಹೋಗಿ ನೋಡಲಾಗಿ ನಮ್ಮ ಅಣ್ಣಾ ಕೆಳಗಡೆ ಬಿದ್ದಿದ್ದ ಒಂದು ಕಾರ ನಿಂತಿತ್ತು. ಒಂದು ಬಿಳಿ ಬಣ್ಣದ ಕಾರು ನಿಂತಿತ್ತು. ನಮ್ಮ ಅಣ್ಣಾನ ಬಲಗಾಲಿನ ಮೇಲೆ ವಾಹನ ಹಾಯ್ದಿತ್ತು. ನಂತರ ವಿಜಯಪೂರದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಂತರ ನಾನು ದೇವರ ಹಿಪ್ಪರಗಿ ಠಾಣೆಗೆ ಬಂದು ದೂರನ್ನು ಸಲ್ಲಿಸಿರುತ್ತೇನೆ. ಚಾ ಸಾ 4 ನನಗೆ ಹೇಳಿದ್ದೇನೆಂದರೆ ನಾನು ನಿಂತಾಗ ಕಾರು ಬಂದು ನನಗ ಹಾಯಿಸಿರುತ್ತಾರೆ ಎಂದು ಹೇಳಿರುತ್ತಾರೆ.ಅಪಘಾತವಾದ ಎರಡನೇ ದಿನಕ್ಕೆ ನನಗೆ ಪೋಲಿಸರು ಕರೆಸಿದ್ದರು ನಾನು ಅಪಘಾತವಾದ ಸ್ಥಳವನ್ನು ತೋರಿಸಿರುತ್ತೇನೆ. ನನ್ನ ಜೊತೆ ಚಾ ಸಾ 2 ಮತ್ತು 3 ರವರು ಇದ್ದರು.

ಈಗ ನನಗೆ ತೋರಿಸಲಾದ ದಾಖಲೆ ಮೇಲೆ ಇರುವ ಸಹಿ ನನ್ನದು ಎಂದು ದೂರನ್ನು ನೋಡಿ ಸಾಕ್ಷಿಯು ಗುರುತಿಸಿದ್ದು ಅದನ್ನು ನಿ.ಪಿ. 1 ಎಂದು, ಸಾಕ್ಷಿಯು ಸಹಿಯನ್ನು ನಿ.ಪಿ. 1 ಎ ಎಂದು ಗುರುತಿಸಲಾಯಿತು. ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ. 2 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿ ನಿಪಿ. 2 ಎ ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ ಫೊಟೊವನ್ನು ಅದನ್ನು ನಿಪಿ. 3 ಎಂದು ಗುರುತಿಸಲಾಯಿತು. ವಾಹನ ಜಪ್ತು ಪಂಚನಾಮೆ ನೋಡಿ ಗುರುತಿಸಿದ್ದು ನಿಪಿ. 4 ಎಂದು, ಸಹಿ ನಿಪಿ. 4 ಎ ಎಂದು ಗುರುತಿಸಲಾಯಿತು. ಭಾವ ಚಿತ್ರವನ್ನು ನಿಪಿ 5 ಎಂದು ಗುರುತಿಸಲಾಯಿತು.

( ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಭಾಗಶ ಪ್ರತಿಕೂಲಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅದಕ್ಕೆ ಆರೋಪಿ ಪರ ವಕೀಲರು ಯಾವುದೇ ತಕರಾರು ವ್ಯಕ್ತಪಡಿಸದ ಕಾರಣ ಮತ್ತು ಸಾಕ್ಷಿಯು ಪ್ರತ್ಯೇಕ್ಷ ಸಾಕ್ಷಿಯಾಗಿದ್ದು ಸಂಪೂರ್ಣವಾಗಿ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದರಿಂದ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

ಪಾಟೀ ಸವಾಲು : ಎ.ಪಿ.ಪಿ. ಯವರಿಂದ

ದಿನಾಂಕ 25-08-2022 ರಂದು ಬೆಳಿಗ್ಗೆ 10.00 ಗಂಟೆಗೆ ದೇವರ ಹಿಪ್ಪರಗಿಯಲ್ಲಿ ನಮ್ಮ ಸಂಬಂಧಿಕರ ಮನೆ ಶಾಂತಿ ಇರುವ ಕಾರಣ ನಾವೆಲ್ಲರೂ ಕಾರ್ಯಕ್ರಮಕ್ಕೆ ಬಂದಿದ್ದೇವು ಎಂದರೆ ನಿಜ. ಬಸ್ ನಿಲ್ದಾಣದ ಹತ್ತಿರ ಬಿಳಿ ಬಣ್ಣದ ಕಾರ ಸಂಖ್ಯೆ ಕೆಎ/28/ಝಡ್ /4186 ನೇದ್ದರ ಚಾಲಕ ಅದನ್ನು ಅತೀ ವೇಗ ಮತ್ತು ನಿರ್ಲಕ್ಷ್ಯತನದಿಂದ ನಡೆಸಿಕೊಂಡು ಬಂದು ನನ್ನ ಅಣ್ಣ ಚಾ ಸಾ 4 ಇತನಿಗೆ ಡಿಕ್ಕಿಪಡಿಸಿ ಆತನ ಬಲಗಾಲಿ ಹಿಂಬಡಿ ಮೇಲೆ ಹಾಯಿಸಿಕೊಂಡು ಹೋಗಿರುತ್ತಾನೆ ಎಂದರೆ ನಿಜ. ಸದರಿ ಅಪಘಾತದಲ್ಲಿ ನನ್ನ ಅಣ್ಣ ಕಾಲಿಗೆ ಪೆಟ್ಟಾಗಿ ಸಾದಾ ಮತ್ತು ತೀವ್ರ ಸ್ವರೂಪದ ಗಾಯವಾಗಿ ಆತನನ್ನು ವಿಜಯಪೂರ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು ಎಂದರೆ ನಿಜ. ಅಪಘಾತವಾದಾಗ ಸಮಯ 4 ಗಂಟೆ ಆಗಿತ್ತು ಎಂದರೆ ನಿಜ. ಆರೋಪಿತನ ತಪ್ಪಿನಿಂದಾಗಿ ಅಪಘಾತವಾಗಿದೆ ಎಂದು ಹೇಳಿ ನಾನು ನಿಪಿ. 1 ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಶ್ರೀ ಬಿ ಜಿ ಎನ್ ವಕೀಲರಿಂದ

ಪಂಚನಾಮೆಗಳ ಮೇಲೆ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ನಿಜ. ಅಪಘಾತ ಚಾಸಾ 4 ರವರು ಒಮ್ಮೆಲೆ ಅಡ್ಡ ಬಂದಿದ್ದರಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ವಿಮೆ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಚಾ ಸಾ 4 ರವರಿಗೆ ವಿಮೆ ಪರಿಹಾರ ದೊರಕಿಸಿ ಕೊಡುವ ಉದ್ದೇಶಕ್ಕಾಗಿ ಸುಳ್ಳು ದೂರನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಅಪಘಾತ ಕುರಿತು ಯಾರು ಹೇಳಿಲ್ಲ ಎಂದರೆ ಸರಿಯಲ್ಲ. ಚಾ ಸಾ 2 ರವರು ಹೇಳಿರುತ್ತಾರೆ.

ಮರು ವಿಚಾರಣೆ ಃ ಇಲ್ಲಾ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ